

ವೆಂಕಟಾಚಲ ಅವರ ಕಾರ್ಯವೈಖರಿ ಮೇಲ್ನೋಟಕ್ಕೆ ಗಡಸು ಎನಿಸುತ್ತಿತ್ತು. ಸರ್ಕಾರಿ ಕಚೇರಿ, ಆಸ್ಪತ್ರೆಗಳ ಮೇಲೆ ದಾಳಿ ಮತ್ತು ದಾಖಲೆಗಳ ಪರಿಶೀಲನೆಗೆ ಅವರ ಮೊದಲ ಪ್ರಾಶಸ್ತ್ಯ. ಜನರಿಂದ ಲಂಚ ತೆಗೆದುಕೊಂಡಿದ್ದವರನ್ನು ಎಲ್ಲರ ಎದುರು ತರಾಟೆಗೆ ತೆಗೆದುಕೊಳ್ಳುತ್ತಿದ್ದರು.

# ಸಮಾಜಮುಖಿ ಲೋಕಾಯುಕ್ತ

ಒಬ್ಬ ಸಮರ್ಥ ವ್ಯಕ್ತಿಗೆ ಅಧಿಕಾರ ದೊರೆತರೆ ಅದನ್ನು ಸಮಾಜಮುಖಿಯಾಗಿ ಹೇಗೆಲ್ಲಾ ಬಳಸಬಹುದು ಎಂಬುದಕ್ಕೆ ಅ. 30ರಂದು ನಿಧನರಾದ ನ್ಯಾಯಮೂರ್ತಿ ಎನ್. ವೆಂಕಟಾಚಲ ಅವರೇ ಸಾಕ್ಷಿ. ರಾಜ್ಯದ 4ನೇ ಲೋಕಾಯುಕ್ತರಾಗಿ 2001ರಿಂದ 2006ರವರೆಗೆ ಕಾರ್ಯನಿರ್ವಹಿಸಿದ್ದ ಅವರು ಅಂಥದ್ದೊಂದು ಸಂಸ್ಥೆ ರಾಜ್ಯದಲ್ಲಿದೆ, ಅದಕ್ಕೆ ಸಾಕಷ್ಟು ಅಧಿಕಾರವಿದೆ ಎಂಬ ಸಂಗತಿ ಜನಜನಿತವಾಗುವಂತೆ ಮಾಡಿದರು.

ಅವರು ಲೋಕಾಯುಕ್ತರಾಗಿದ್ದ ಕಾಲದಲ್ಲಿ ಸಾಮಾನ್ಯ ಜನರೂ ಸರ್ಕಾರಿ ಅಧಿಕಾರಿಗಳಿಗೆ ‘ಎಲ್ಲ ದಾಖಲೆಗಳು ಸರಿಯಾಗಿವೆ, ಆದ್ರೂ ಲಂಚ ಕೇಳ್ತೀರಲ್ಲಾ. ನಮ್ಮ ಕೆಲಸ ಮಾಡಿಕೊಡಿ, ಇಲ್ಲದಿದ್ರೆ ಲೋಕಾಯುಕ್ತರಿಗೆ ದೂರು ಕೊಡ್ತೀವಿ’ ಎಂದು ನೇರವಾಗಿ ಹೇಳುವ ಪರಿಸ್ಥಿತಿ ಇತ್ತು.

ವೆಂಕಟಾಚಲ ಅವರ ಕಾರ್ಯವೈಖರಿ ಮೇಲ್ನೋಟಕ್ಕೆ ಗಡಸು ಎನಿಸುತ್ತಿತ್ತು. ಸರ್ಕಾರಿ ಕಚೇರಿ, ಆಸ್ಪತ್ರೆಗಳ ಮೇಲೆ ದಾಳಿ ಮತ್ತು ದಾಖಲೆಗಳ ಪರಿಶೀಲನೆಗೆ ಅವರ ಮೊದಲ ಪ್ರಾಶಸ್ತ್ಯ. ಜನರಿಂದ ಲಂಚ ತೆಗೆದುಕೊಂಡಿದ್ದವರನ್ನು ಎಲ್ಲರ ಎದುರು ಗದರಿ, ತರಾಟೆಗೆ ತೆಗೆದುಕೊಳ್ಳುತ್ತಿದ್ದರು. ಲಂಚ ಪಡೆದ ಆರೋಪ ಹೊತ್ತವರಿಂದ ಅದನ್ನು ಅಲ್ಲಿಯೇ ಜನರಿಗೆ ಕೊಡಿಸಿಬಿಡುತ್ತಿದ್ದರು. ಹೀಗಾಗಿಯೇ ಅವರನ್ನು ಜನ ಮೆಚ್ಚಿದರು, ಗೌರವಿಸಿದರು.

‘ಸಣ್ಣಪುಟ್ಟವರನ್ನು ಮಾತ್ರ ಹೆದರಿಸ್ತಾರೆ, ಪ್ರಚಾರದ ಹಪಹಪಿಯಿದೆ, ಜಾತಿ ಪ್ರೀತಿ ಜಾಸ್ತಿ’ ಇತ್ಯಾದಿ ಆರೋಪಗಳು ವೆಂಕಟಾಚಾಲ ಅವರ ಮೇಲಿದ್ದವು. ಒಮ್ಮೆ ಲೋಕಾಯುಕ್ತ ಕಚೇರಿಯಲ್ಲಿ ಅವರನ್ನು ಸಂದರ್ಶನ ಮಾಡುವ ಅವಕಾಶ ಸಿಕ್ಕಾಗ ಈ ಪ್ರಶ್ನೆಗಳಿಗೆ ಅವರು ಆತ್ಮವಿಶ್ವಾಸದಿಂದಲೇ ಮುಖಾಮುಖಿಯಾಗಿದ್ದರು.

‘ನೋಡ್ರೀ, ಯಾರನ್ನೋ ಸುಮ್‌ಸುಮ್ನೆ ಹೆದರಿಸಿ ನಾನು ದೊಡ್ಡವನು ಅನ್ನಿಸಿಕೊಳ್ಳಬೇಕಿಲ್ಲ. ಸರ್ಕಾರ ಜನರಿಗಾಗಿ ಎಷ್ಟೊಂದು ಯೋಜನೆ ತಂದಿದೆ. ಅವನ್ನು ಜನರಿಗೆ ತಲುಪಿಸಬೇಕಾದವರು ಯಾರು? ನನಗೆ ಅಂತ್ಲೇ ಅಲ್ಲ, ಯಾರಿಗಾದರೂ ಸರಿ ಇಂಥವರು ಹೆದರಿಯಾದ್ರೂ ಒಂದಿಷ್ಟು ಕೆಲಸ ಮಾಡ್ತಿದ್ದಾರೆ ಅಂದ್ರೆ ಅದು ಸಂತೋಷದ ವಿಚಾರ ಅಲ್ವಾ...? ಒಂದು ಕಡೆ ಹೀಗಾಯ್ತು, ಲೋಕಾಯುಕ್ತರು ಸಿಟ್ಟಾಗಿ ಜನರ ಎದುರೇ ಅಧಿಕಾರಿಗಳನ್ನು ಬೈದ್ರು ಅಂತ ಗೊತ್ತಾದ್ರೆ ಹತ್ತು ಕಡೆ ರಿಪೇರಿ ಆಗುತ್ತೆ ಕಣ್ರೀ’ ಎಂದು ತಮ್ಮ ‘ದಾಳಿ’ ವ್ಯಕ್ತಿತ್ವದ ಹಿಂದಿದ್ದ ಸಾತ್ವಿಕ ಕಾರಣವನ್ನು ವಿವರಿಸಿದ್ದರು.

ಲೋಕಾಯುಕ್ತ ಸಂಸ್ಥೆಯ ಅಧಿಕಾರವನ್ನು ಜನಪರವಾಗಿ ಬಳಸಿ, ‘ಲೋಕಾಯುಕ್ತರು ಹೀಗೂ ಕೆಲಸ ಮಾಡಬಹುದು’ ಎಂದು ಸಾಧಿಸಿ ತೋರಿಸಿದವರು ಅವರು. ಬಹುಶಃ ಇದೇ ಕಾರಣಕ್ಕೆ ಇರಬೇಕು, ಅವರು ನಿಧನರಾದ ಅ.30ರಂದು ಹಲವು ಪ್ರಮುಖ ಕನ್ನಡ ಜಾಲತಾಣಗಳು ‘ಪ್ರಥಮ ಲೋಕಾಯುಕ್ತ ಎನ್. ವೆಂಕಟಾಚಲ ನಿಧನ’ ಎಂದೇ ಬರೆದಿದ್ದವು. ಅದನ್ನು ಕೇವಲ ಕಣ್ತಪ್ಪು ಎನ್ನಲು ಆಗದು. ವೆಂಕಟಾಚಲ ಬರುವವರೆಗೆ ಇಂಥದ್ದೊಂದು ಸಂಸ್ಥೆ ಇದೆ ಎನ್ನುವುದೇ ಜನರ ಗಮನಕ್ಕೆ ಬಂದಿರಲಿಲ್ಲ. ■

ಕೋಲಾರ ಜಿಲ್ಲೆ ಮುಳಬಾಗಲು ತಾಲ್ಲೂಕು ಮಿಟ್ಟೂರು ವೆಂಕಟಾಚಲ ಅವರ ಹುಟ್ಟೂರು. ಜುಲೈ 3, 1930ರಂದು ಜನಿಸಿದ ವೆಂಕಟಾಚಲ ಮುಳಬಾಗಲು, ಕೋಲಾರ ಮತ್ತು ಬೆಂಗಳೂರಿನಲ್ಲಿ ವಿದ್ಯಾಭ್ಯಾಸ ಮಾಡಿದರು. ಮೈಸೂರು (ಈಗ ಕರ್ನಾಟಕ) ಹೈಕೋರ್ಟ್‌ನಲ್ಲಿ ನವೆಂಬರ್ 16, 1965ರಂದು ವಕೀಲರಾಗಿ ಸನ್ನದು ನೋಂದಣಿ ಮಾಡಿಸಿದರು.

ಬೆಂಗಳೂರು ಕೃಷಿ ವಿವಿ, ಬೆಂಗಳೂರು ವಿವಿ ಕಾನೂನು ಸಲಹೆಗಾರರಾಗಿದ್ದ ವೆಂಕಟಾಚಲ, ನವೆಂಬರ್ 28, 1977ರಂದು ಕರ್ನಾಟಕ ಹೈಕೋರ್ಟ್ ನ್ಯಾಯಮೂರ್ತಿಯಾಗಿ ನೇಮಕಗೊಂಡರು. 1992ರ ಮೇ ತಿಂಗಳಲ್ಲಿ ಕರ್ನಾಟಕ ಹೈಕೋರ್ಟ್‌ನ ಹಂಗಾಮಿ ಮುಖ್ಯ ನ್ಯಾಯಮೂರ್ತಿಯಾಗಿದ್ದರು. ಜುಲೈ 1, 1992ರಂದು ಸುಪ್ರೀಂಕೋರ್ಟ್ ನ್ಯಾಯಮೂರ್ತಿಯಾಗಿ ಪದೋನ್ನತಿ ಹೊಂದಿ, ಜುಲೈ 2, 1995ರಂದು ನಿವೃತ್ತರಾದರು. ಜುಲೈ 2, 2001ರಂದು ಕರ್ನಾಟಕ ಲೋಕಾಯುಕ್ತರಾಗಿ ಅಧಿಕಾರ ಸ್ವೀಕರಿಸಿದ ನಂತರ ತಮ್ಮ ಕಾರ್ಯವೈಖರಿ ಮತ್ತು ಜನಪರ ಕಾಳಜಿಯಿಂದ ಅಪಾರ ಜನಪ್ರಿಯತೆ ಗಳಿಸಿದ್ದರು.

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65